**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-279/2025 **PW**: 1

**ದಿಃ 13.05.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಎ ಎಸ ಎಸ್ ವಕೀಲರಿಂದಃ**

ನಾನು ಪಿಯುಸಿ ಓದಿರುತ್ತೇನೆ. ಏನೂ ಕೆಲಸ ಮಾಡುವುದಿಲ್ಲ. ಸದರಿ ಅಪಘಾತ ಜೇವರ್ಗಿ ತಾಲೂಕಿನ ಹಿಪ್ಪರಗಿಯಲ್ಲಿ ನಡದಿರುತ್ತದೆ. ನಾನು ಆ ದಿನ ಕಾರಿನಲ್ಲಿ ಗುಲ್ಬರ್ಗಾದಿಂದ ಬಿಜಾಪೂರಕ್ಕೆ ಹೋಗುತ್ತಿದ್ದೆನು. ಸದರಿ ಕಾರು ನಮ್ಮ ಸಂಬಂದಿಕರಾಗಿದ್ದ ನಾವು ಅದನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿದ್ದೆವು. ಸದರಿ ಕಾರಿನಲ್ಲಿ ಕಾರಿನ ಚಾಲಕನನ್ನು ಬಿಟ್ಟು ಐದು ಮಂದಿ ಇದ್ದೆವು. ಸದರಿ ಕಾರು ಮುಜಾಹೀದ ಮೌಲ್ವಿ ರವರ ಹೆಸರಿನಲ್ಲಿದೆ. ಸದರಿ ಕಾರಿಗೆ ಎಷ್ಟು ಬಾಡಿಗೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ. ಸದರಿ ಮುಜಾಹೀದ ಮೌಲ್ವಿ ಕಾರಿನ ಮಾಲೀಕ ಎಂದರೆ ಸರಿ. ಸದರಿಯವರು ನನಗೆ ಸಂಬಂದಿಕರಲ್ಲ.

2. ಸದರಿ ಅಪಘಾತವಾದ ನಂತರ ನನ್ನನ್ನು ಯುನೈಟೆಡ ಆಸ್ಪತ್ರೆ ಗುಲಬರ್ಗಾದಲ್ಲಿಗೆ ಕರೆದುಕೊಂಡು ಹೋದರು. ಎಷ್ಟು ಸಮಯಕ್ಕೆ ಹೋಗಿ ದಾಖಲಾದಿರಿ ಎಂದರೆ ಸಾಕ್ಷಿ ಬೆಳಿಗ್ಗೆ 9.30 ರಿಂದ 10.00 ರ ಸಮಯಕ್ಕೆ ಎನ್ನುತ್ತಾರೇ. ದಿನಾಂಕಃ27.10.2023 ರಂದು ನಾನು ಡಿಸ್ಚಾರ್ಜ ಆಗಿರುತ್ತೇನೆ. ನಾನು ಒಂದು ದಿನ ಮಾತ್ರ ದಾಖಲಾಗಿದ್ದೆ ಎಂದರೆ ಸರಿ. ನನಗೆ ಅಪಘಾತದಿಂದ ಸಾದಾ ಸ್ವರೂಪದ ಗಾಯಗಳಾಗಿದ್ದವು ಎಂದರೆ ಸಾಕ್ಷಿ ಸರಿಯಲ್ಲ, ಕಾಲರ ಬೋನ ಹಾಗೂ ಬ್ಯಾಕ ಡಿಸ್ಕ ಡ್ಯಾಮೇಜ ಆಗಿದ್ದವು ಎನ್ನುತ್ತಾರೆ. ಮತ್ತು ತಲೆ ಹಿಂಬಾಗಕ್ಕೆ ಪೆಟ್ಟು ಬಿದ್ದು ಸ್ಟಿಚ ಆಗಿದೆ ಎನ್ನುತ್ತಾರೆ. ಯುನೈಟೆಡ ಆಸ್ಪತ್ರೆನಲ್ಲಿ ಚಿಕಿತ್ಸೆ ಪಡೆದ ನಂತರ ನಾನು ಸಂಪೂರ್ಣ ಗುಣಮುಖನಾಗಿದ್ದು ನನಗೆ ಯಾವದೇ ರೀತಿಯ ಬೇರೆ ತರಹದ ತೊಂದರೆ ಇರುವುದಿಲ್ಲ ಮತ್ತು ಯಾವದೇ ಅಂಗನ್ಯೂನತೆ ಇರುವದಿಲ್ಲ ಎಂದರೆ ಸರಿಯಲ್ಲ. ನಿಪಿ 15 ರ ಕ್ರಮ ಸಂಖ್ಯೆ 13 ರ ಬಿಲ್ಲು ಅಂದರೆ ದಿನಾಂಕಃ31.10.2023 ರಂದು ಪಡೆದುಕೊಂಡ ಚಿಕಿತ್ಸೆ ಬಿಟ್ಟರೇ ನಾನು ಬೇರೆ ಯಾವದೇ ರೀತಿಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸಾಕ್ಷಿ ನನಗೆ ಇನ್ನೂ ಕೂಡಾ ಬ್ಯಾಕ ಪೇನ ಇದೆ ಆದರೆ ಯಾವದೇ ದಾಖಲೆ ಹಾಜರುಪಡಿಸಿಲ್ಲ ಬೆಳಗಾಂವನ ಕಿನಿಯಾ ಆಸ್ಪತ್ರೆ ಯಲ್ಲಿ ನಾನು ಆಯುರ್ವೇದಿಕ ಮೆಡಿಸಿನ ತೆಗೆದುಕೊಳ್ಳುತ್ತಿದ್ದೇನೆ ಎನ್ನುತ್ತಾರೆ. ಸದರಿ ಅಪಘಾತದಿಂದ ನನಗೆ clavical ಬೋನ ಹೊರತುಪಡಿಸಿ ನನಗೆ ಯಾವದೇ ರೀತಿ ಮೂಳೆ ಮುರಿತ ಆಗಿಲ್ಲ ಎಂದರೆ ಸರಿ. ನಿಪಿ 15 ರ ಸೀರಿಯಲ್ಲ ನಂಃ1 ದಾಖಲೆ ಹಣವನ್ನು ಅಡ್ವಾನ್ಸ ಆಗಿ ಕೊಟ್ಟಿದ್ದು ಎಂದರೆ ಸರಿ. ನಿಪಿ 15 ರ ಸೀರಿಯಲ್ಲ ನಂಃ1 ರ ರಶೀದಿಗೆ ಸಂಬಂದಿಸಿದಂತೆ ಯಾವ ಯಾವ ಬಿಲ್ಲುಗಗಳೆ ಸಂಬಂದಿಸಿದಂತೆ ಆ

ಬಿಲ್ಲುಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ಬಳಿ ಏನು ಇದ್ದವೋ ಆವುಗಳನ್ನು ಹಾಜರುಪಡಿಸಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ಅದೇ ರೀತಿ ಸದರಿ ರಶೀದಿಯಲ್ಲಿ 11200/- ರೂ ಗಳಿಗೆ ಯಾವ ಯಾವ ಮೆಡಿಸಿನಗೆ ಸಂಬಂದಿಸಿದಂತೆ ಬಿಲ್ಲು ಹಾಕಿದ್ದಾರೆಂದು ವಿವರ ಇಲ್ಲ ಎಂದರೆ ಸಾಕ್ಷಿ ನನ್ನ ಬಳಿ ಏನು ಇದ್ದವೋ ಅವುಗಳನ್ನು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನಾನು ಬೇರೆ ಕಡೆ ಸದರಿ ಬಿಲ್ಲುಗಳನ್ನು ಹಾಜರುಪಡಿಸಿ ಕ್ಲೇಮ ತೆಗೆದುಕೊಂಡಿರುವ ಕಾರಣ ಅವುಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈಗಲೂ ಸಹ ನನಗ ಅಪಘಾತದಿಂದಾದ ಗಾಯಗಳಿಂದ ಕೂಡಲು, ನಡೆದಾಡಲು ಬರುವದಿಲ್ಲ ಎಂದು ಸಂಪೂರ್ಣ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ಆಸ್ಪತ್ರೆಗೆ ಮತ್ತು ಮಡಿಸಿನ ಖರ್ಚಿಗಾಗಿ 50000/- ರೂ ಗಳನ್ನು ಖರ್ಚು ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನಂತರ ಸಂಪೂರ್ಣ ಗುಣಮುಖವಾಗಿದ್ದು ನನಗೆ ಯಾವದೇ ರೀತಿಯ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ವ್ಯಾಪಾರ ಮಾಡುತ್ತಿದ್ದೆ ಹಾಗೂ ತಿಂಗಳಿಗೆ 30 ಸಾವಿರ ರೂ ಗಳನ್ನು ಗಳಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಮತ್ತು ಆ ಸಂಬಂದ ಯಾವದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ವ್ಯಾಪಾರ ಮಾಡುತ್ತಿದ್ದೆ ಎನ್ನುತ್ತಾರೆ.

3. ಕಾರು ಸಂಖ್ಯೆಃ ಕೆಎ-32/ಎನ್-3681 ಚಾಲಕನ ತಪ್ಪು ಇದರಲ್ಲಿ ಇಲ್ಲ ಎಂದರೆ ಸಾಕ್ಷಿ ಆತನೇ ತುಂಬಾ ವೇಗವಾಗಿ ಕಾರನ್ನು ಚಾಲನೆ ಮಾಡಿ ಅಪಘಾತಪಡಿಸಿದ್ದ ಎಂದರೆ ಸಾಕ್ಷಿ ನುಡಿಯುತ್ತಾರೆ. ಸದರಿ ಕಾರನ್ನು 1 ನೇ ಎದುರುದಾರ ಬಾಡಿಗೆಗಾಗಿ ಬಳಸಿ ವಿಮಾ ಕರಾರನ್ನು ಉಲ್ಲಂಘಿಸಿರವ ಕಾರಣ 2 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಕಾರು ಚಾಲಕನಿಗೆ ಅಪಘಾತದ ಸಮಯದಲ್ಲಿ ಸೂಕ್ತ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎನ್ನುತ್ತಾರೆ. 2 ನೇ ಎದುರುದಾರರು ನನಗೆ ಯಾವದೇ ರೀತಿಯಿಂದಲೂ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಮರು ವಿಚಾರಣೆ ಇಲ್ಲಾ -

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.